# ಶ್ರಾವಣ ದರ್ಶನ :24ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಆ. 13 :** ದಾರ್ಶನಿಕರನ್ನು ಅವತಾರಿ ಪುರುಷರನ್ನಾಗಿ ಬಿಂಬಿಸಬಾರದು. ಅವರನ್ನು ದೈವತ್ವಕ್ಕೇರಿಸಬಾರದು. ಕಾರಣ ಅವರ ಚಲನಶೀಲತೆ ನಾಶವಾಗುತ್ತದೆ. ಸುಧಾರಕರು, ದಾರ್ಶನಿಕರು ಮಾಡಿದ ಪ್ರಯೋಗಗಳು ದೈವತ್ವದೊಂದಿಗೆ ಸಮಾಪ್ತಗೊಳ್ಳುತ್ತವೆ. ಅವರು ಜೀವನದುದ್ದಕ್ಕು ಅನುಭವಿಸಿದ ಕ್ರಿಯಾಶೀಲತೆ ಗಣನೆಗೆ ಬಾರದೆ ಹೋಗುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಮುರುಘಾಮಠದಿಂದ ಗುರುವಾರ ನಡೆದ ಶ್ರಾವಣದರ್ಶನ 24ನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಅವತಾರದ ಪರಿಕಲ್ಪನೆ : ಸಮಕಾಲೀನ ಚಿಂತನೆ ವಿಷಯ ಕುರಿತು ಚಿಂತನ ನೀಡಿದ ಶ್ರೀಗಳು, ಭಾರತೀಯರಲ್ಲಿ ಅವತಾರ ಎದ್ದುಕಾಣುತ್ತದೆ. ಧರ್ಮಗ್ಲಾನಿಯಾದಾಗ ಒಬ್ಬೊಬ್ಬರ ರೂಪದಲ್ಲಿ ಜನ್ಮ ತಾಳಿ ಬಂದು ಸಮಸ್ಯೆಗಳನ್ನು ನಿವಾರಣೆ ಮಾಡುತ್ತದೆ ಎಂಬ ಕಲ್ಪನೆ. ಅವತಾರ ದೇವರು ಮತ್ತು ದೇವತೆಗಳಿಗೆ ಸಂಬಂಧಿಸಿದುದು. ಭಾರತೀಯರಲ್ಲಿ ದಶವಾತಾರಗಳ ಪರಿಕಲ್ಪನೆ ಇದೆ. ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ, ನರಸಿಂಹಾವತಾರ, ವಾಮನ ಅವತಾರ, ಪರಶುರಾಮಾವತಾರ, ರಾಮ, ಕೃಷ್ಣ, ಬುದ್ಧಾವತಾರ, ಕಲ್ಕಿ ಅವತಾರ - ಇವು ದಶಾವತಾರಗಳು. ಇವು ಬಹಳ ಮುಖ್ಯವಾಗುತ್ತವೆ ಭಾರತೀಯರಲ್ಲಿ. ಇದು ದೇವಲೋಕಕ್ಕೆ ಸೀಮಿತವಾದುದು. ದೇವ, ದಾನವ, ಮಾನವ ಎನ್ನುವ ಮೂರು ಹಂತಗಳು.

ಜನ್ಮಾಂತರ (ಪುನರ್ಜನ್ಮ) : ಇದರ ಪ್ರಕಾರ 84 ಲಕ್ಷ ಜೀವರಾಶಿಗಳಿವೆ ಎಂದು ಶಾಸ್ತ್ರ ಪುರಾಣಗಳಲ್ಲಿ ಬರೆಯಲಾಗಿದೆ. ಒಂದೊಂದು ಜೀವಿ ಮೂಲಕ ಜೀವನ ಸಾಗಿಸುತ್ತ ಬೇರೆ ಬೇರೆ ಜೀವಿಗಳಿಗೆ ಜನ್ಮ ಪಡೆಯುತ್ತ ಹೋಗುವುದು. ಯಾರು ಆತ್ಮದ ಇರುವಿಕೆಯನ್ನು ಒಪ್ಪಿಕೊಳ್ಳುತ್ತಾರೋ ಅಲ್ಲಿ ಮರುಹುಟ್ಟು ಸಾಧ್ಯವಿದೆ. ಆ ನೆಲೆಯಲ್ಲಿ ನೋಡುವುದಾದರೆ ಶರೀರಕ್ಕೆ ಸಾವಿದೆ, ಆತ್ಮಕ್ಕೆ ಸಾವಿಲ್ಲ ಎಂದು ಬಿಂಬಿಸಿಕೊಂಡು ಬರಲಾಗಿದೆ. ಭಾರತೀಯರಲ್ಲಿ ಶರೀರವನ್ನು ತೊರೆದ ಎಂದರೆ ಪಾಶ್ಚಾತ್ಯದಲ್ಲಿ ಜೀವವನ್ನು, ಆತ್ಮವನ್ನು ತೊರೆದುಹೋದ ಎನ್ನುತ್ತಾರೆ. ಪ್ರಾಣಕ್ಕೆ ಆತ್ಮ ಎಂದು ಕರೆದುಕೊಳ್ಳುತ್ತಾರೆ. ಜನ್ಮಾಂತರದ ಪರಿಕಲ್ಪನೆ ಎಲ್ಲ ಧರ್ಮಗಳಲ್ಲು ಇದೆ. ಪುನರ್ಜನ್ಮವನ್ನು ಒಪ್ಪುತ್ತಾರೆ. ಪುನರ್ಜನ್ಮದ ಮೂಲ ಒಂದು ಆತ್ಮ. ಇಲ್ಲಿ ಆತ್ಮ ದೆವ್ವದ ಸ್ವರೂಪ ಪಡೆದುಕೊಳ್ಳುತ್ತದೆ. ಅತೃಪ್ತ ಮನಸ್ಸುಗಳು ಯಾವುದೋ ಶರೀರವನ್ನು ಹೊಕ್ಕು ಸತಾಯಿಸುವ ಸಂದರ್ಭಗಳು. ಇವು ಒಂದುರೀತಿ ಭ್ರಮೆಯ ಕಲ್ಪನೆಗಳು. ದೆವ್ವದ ಸ್ವರೂಪ ಪಡೆದುಕೊಂಡು ಪರಕಾಯ ಪ್ರವೇಶವಾಗುವುದು.

ಭವಾಂತರ : ಬಸವಣ್ಣ ಅವತಾರಿ ಅಲ್ಲ. ಹಾಗೆ ನಾವು ಭಾವಿಸಬಾರದು. ಅವರು ಕ್ರಾಂತಿಕಾರಿ. ಬಸವಣ್ಣ ನಂದಿ ಅವತಾರ ಅನ್ನಲಿಕ್ಕೆ ಬಸವಣ್ಣ ಒಂದು ವಚನ ಹೇಳುತ್ತಾರೆ-

ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ

ನಿಮ್ಮಾಣೆ, ನಿಮ್ಮ ಪ್ರಮಥರಾಣೆ !

ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ

ಪ್ರಥಮ ಭವಾಂತರದಲ್ಲಿ

ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು

ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ.

ಎರಡನೆಯ ಭವಾಂತರದಲ್ಲಿ

ಸ್ಕಂದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು

ನಿಮ್ಮ ಕಾರುಣ್ಯವ ಮಾಡಿರಿಸಿಕೊಂಡಿರ್ದಿರಯ್ಯಾ.

ಮೂರನೆಯ ಭವಾಂತರದಲ್ಲಿ

ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು

ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿರ್ದಿರಯ್ಯಾ

ನಾಲ್ಕನೆಯ ಭವಾಂತರದಲ್ಲಿ

ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು

ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿರ್ದಿರಯ್ಯಾ.

ಐದನೆಯ ಭವಾಂತರದಲ್ಲಿ

ಕಾಲಲೋಚನನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು

ಸರ್ವಕಾಲಸಂಹಾರವ ಮಾಡಿಸುತ್ತಿರ್ದಿರಯ್ಯಾ.

ಆರನೆಯ ಭವಾಂತರದಲ್ಲಿ

ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು

ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿರ್ದಿರಯ್ಯಾ

ಏಳನೆಯ ಭವಾಂತರದಲ್ಲಿ

ಬಸವದಣ್ಣಾಯಕನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು,

ನಿಮ್‌ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿರ್ದಿರಯ್ಯಾ.

ಇದು ಕಾರಣ ಕೂಡಲಸಂಗಮದೇವಾ

ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ.

ಈ ವಚನದಲ್ಲಿ ಭವಾಂತರ ಶಬ್ದವನ್ನು ಬಸವಣ್ಣ ಬಳಸಿದ್ದಾರೆ. ಅದು ಅಷ್ಟೊಂದು ಅಪಾಯಕಾರಿ ಅಲ್ಲ. ಕೆಲವರು ಬಸವಣ್ಣನವರಿಗೆ ಅಲ್ಪಾಯುವಾಯ್ತು. ಅವರು ಇನ್ನು ಬದುಕಬಹುದಿತ್ತು ಎನ್ನುತ್ತಾರೆ. ಈ ವಚನ ಆಧಾರವಾಗಿಟ್ಟುಕೊಂಡು ಸಮರ್ಥಿಸುವುದಾದರೆ ಪ್ರತಿಯೊಂದು ಭವಾಂತರಕ್ಕೆ 10ವರ್ಷ. ಇವರು ಏಳು ಭವಾಂತರ ಹೇಳಿದ್ದಾರೆ. ಏಳು ಭವಾಂತರಕ್ಕೆ 70 ವರ್ಷ. ಇದು ವೈಜ್ಞಾನಿಕ ಸತ್ಯ. ಪ್ರತಿಯೊಬ್ಬ ವ್ಯಕ್ತಿಯಲ್ಲಿ 10ವರ್ಷಕ್ಕೊಮ್ಮೆ ಅವರ ಶರೀರದಲ್ಲಿ ಅಗಾಧವಾದ ಬದಲಾವಣೆ ಆಗುತ್ತದೆ. 70ವರ್ಷಗಳಲ್ಲಿ ಮನುಷ್ಯ ಪರಿಪಕ್ವತೆ ಹೊಂದುತ್ತಾನೆ. ಬಸವಣ್ಣ ಅಲ್ಪಾಯು ಅಲ್ಲ. ಗಣ ಎಂದರೆ ಸಮೂಹ. ಸಮೂಹಕ್ಕೆ ಯಾರು ಒಡೆಯನೊ ಅವನು ಗಣಪತಿ. ಗಣಪತಿಯ ಪರಿಕಲ್ಪನೆ ಭಾರತೀಯರಲ್ಲಿ ಇದೆ. ಗಣ ಎಂದರೆ ಸಮಾಜ. ಗಣಪತಿ ಎಂದರೆ ಪ್ರಜಾಪತಿ. ಯಾರ ಮಿದುಳಿನಲ್ಲಿ ಪ್ರಬುದ್ಧವಾದ ಬದ್ಧತೆ, ಕ್ರಿಯಾಶಕ್ತಿ ಇರುತ್ತದೋ ಅವನು ಗಣವನ್ನು ನಿಯಂತ್ರಣ ಮಾಡುತ್ತಾನೆ. 770 ಅಮರಗಣಂಗಳಿಗೆ ಅಧಿಪತಿಯಾಗಿದ್ದ. ಶರಣಸಂಸ್ಕøತಿಯಲ್ಲಿ ಹಿರಿಯದಣ್ಣಾಯಕ ಎನ್ನುತ್ತಾರೆ. ಬಸವಣ್ಣನವರಿಗೆ ಹಿರಿಯ ದಂಡನಾಯಕ ಎನ್ನುತ್ತಿದ್ದರು. ಚೆನ್ನಬಸವಣ್ಣನವರಿಗೆ ಕಿರಿಯ ದಂಡನಾಯಕ ಎನ್ನುತ್ತಿದ್ದರು. ಶಿವ-ಜೀವರ ಸಂಬಂಧ. ಶಿವಭಾವ ಮತ್ತು ಸೇವಾಭಾವ. ಏಳು ಭವಾಂತರಗಳನ್ನು ಬಸವಣ್ಣನವರು ಶಿವಭಾವ ಸೇವಾಭಾವ ಹೊಂದಿ ಜನರ ಸೇವೆ ಮಾಡಿದರು. ದಾರ್ಶನಿಕರನ್ನು ಅವತಾರಿ ಪುರುಷರನ್ನಾಗಿ ಬಿಂಬಿಸಬಾರದು. ಅವರನ್ನು ದೈವತ್ವಕ್ಕೇರಿಸಬಾರದು. ಕಾರಣ ಅವರ ಚಲನಶೀಲತೆ ನಾಶವಾಗುತ್ತದೆ. ಸುಧಾರಕರು, ದಾರ್ಶನಿಕರು ಮಾಡಿದ ಪ್ರಯೋಗಗಳು ದೈವತ್ವದೊಂದಿಗೆ ಸಮಾಪ್ತಗೊಳ್ಳುತ್ತವೆ. ಅವರು ಜೀವನದುದ್ದಕ್ಕು ಅನುಭವಿಸಿ ಕ್ರಿಯಾಶೀಲತೆ ಗಣನೆಗೆ ಬಾರದೆ ಹೋಗುತ್ತದೆ. ಸೃಜನಶೀಲತೆ ನಾಶವಾಗುತ್ತದೆ. ರಚನಾತ್ಮಕತೆ, ವಿಧಾಯಕವಾದ ಕಾರ್ಯಗಳು, ಪ್ರಾಯೋಗಿಕತೆ ಅಳಿದು ಹೋಗುತ್ತದೆ. ದೈವತ್ವ ವಿಜೃಂಭಿಸುತ್ತದೆ ಶರಣತ್ವ ಮೂಲೆಗುಂಪಾಗುತ್ತದೆ. ಜನರು ದಾರ್ಶನಿಕರಿಗೆ ದೇವರು ಎನ್ನುತ್ತಾರೆ. ಸೇವಾ ಭಾವನೆಯಲ್ಲಿ ಸರ್ವವೂ ಅಡಕವಾಗಿದೆ. ಕ್ರಾಂತಿಕಾರಿ ಬಸವಣ್ಣನವರು ಕಲ್ಯಾಣ ಕಟ್ಟಿದರು. ಅವತಾರಿ ಬಸವಣ್ಣ ಕಟ್ಟಲಿಲ್ಲ; ಕ್ರಾಂತಿಕಾರಿ ಬಸವಣ್ಣ ಗಣಂಗಳನ್ನು ಒಟ್ಟಗೂಡಿಸಿದರು ಎಂದರು.